
ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಮೂರು ಬೆರಳಿನ ಮಳ್ಳಿಮಳ್ಳಿ ಮಿಂಚುಳ್ಳಿ

ಅರ್ಧ ಗಂಟೆ ಕಳೆಯುವುದರಲ್ಲಿ ಎಲ್ಲೆಂದಿಲೋ ಮಿಂಚಿನಂತೆ ಬಂದು ನನ್ನ ಕನಸಿನ ಹಕ್ಕಿ ಕೂತೇ ಬಿಟ್ಟಿತು. ನಾನು ಪಟ ತೆಗೆಯದೇ ದಿಗ್ಭ್ರಮೆಗೊಂಡು ಅತೀವ ಸಂತೋಷದ ಕಣ್ಣುಗಳಿಂದ ಅದನ್ನೇ ನೋಡತೊಡಗಿದೆ.



ಚಂದದ ಬಣ್ಣದ ಹಕ್ಕಿಗಳು ಎಲ್ಲೆಲ್ಲಿ ಸಿಗುತ್ತವೆ, ಯಾವಾಗ ಗೂಡು ಕಟ್ಟುತ್ತವೆ, ಯಾರನ್ನು ಸಂಪರ್ಕಿಸಿ ಪಕ್ಷಿಗಳ ಪಟ ತೆಗೆಯಬಹುದೆಂಬ ಪಕ್ಕಾ ಪ್ಲಾನ್‌ಗಳೆಲ್ಲ ರೂಪಿಸುವುದು ಸುಲಭವಲ್ಲ. ಇದಕ್ಕಾಗಿಯೇ ಜನ್ಮವೆತ್ತಿದ ಗೆಳೆಯ ಶಶಿಸಿಂಗ್ ಒಮ್ಮೆಗೇ ಫೋನು ಮಾಡಿ 'ತಕ್ಷಣ ಹೊರಟು ಬಿಡಿ ಸರ್' ಎಂದರು. ಬಹಳಷ್ಟು ಸಲ ನಮ್ಮ ಪ್ರಯಾಣ ಶುರುವಾಗುವುದೇ ಹೀಗೆ ಏಕಾಏಕಿ. ಆಗ ಇರುವ ಕೆಲಸವೆಲ್ಲಾ ಕೈಬಿಟ್ಟು ದಢಾರಂತ ಓಡೋಡಿ ಹೋಗಲು ರೆಡಿಯಾಗಬೇಕು. ಮನೆಯಲ್ಲಿ ಹೆಂಡತಿಗೆ ದುಂಬಾಲು ಬಿದ್ದು ಒಪ್ಪಿಸಬೇಕು. ಆಕೆ ಗುರ್ ಎಂದು ಗುರಾಯಿಸಿ ತಿನ್ನುವಂತೆ ನೋಡುವ ನೋಟವನ್ನು ಸಹಿಸಿ ನುಂಗಬೇಕು. ಬೈದರೆ ದೇಶಾವರಿ ನಗೆ ಚೆಲ್ಲಿ ಅಪರಾಧಿ ಮೋರೆ ತೋರಬೇಕು. ಆ ಕ್ಷಣಕ್ಕೆ ಆಕೆ ನನ್ನ ಹಲವಾರು ಜವಾಬ್ದಾರಿ ನೆನಪು ಮಾಡುವಳು. ಅದಕ್ಕೆಲ್ಲಾ ಸಮಜಾಯಿಷಿ ಕೊಡಬೇಕು. ಹೀಗೆ ನಾನಾ ಹಂತದ ಅಡೆತಡೆಗಳ ದಾಟಬೇಕು. ಈ ಸಲದ ಕರೆಯ ಖುಷಿ ಎಂದರೆ ನನ್ನ ಇಷ್ಟದ ಹಕ್ಕಿಯ ಹುಡುಕಾಟದ್ದು. ಇದರ ಫೋಟೊ ತೆಗಿಯಬೇಕೆಂದು ನನ್ನ ಬಹಳ ವರ್ಷಗಳ ಕನಸು. ಇವತ್ತು ಕಾಲ ಕೂಡಿ ಬಂದಿತ್ತು. ಹೀಗಾಗಿ ಎಂದಿನ ಮೊಂಡುತನದಲ್ಲಿ ಹೊರಟೇ ಬಿಟ್ಟೆ.

ವಿಚಿತ್ರ ಎಂದರೆ ಈ ಹಕ್ಕಿ ಸಿಗುವುದೇ ಬಿರುಸು ಮಳೆಗಾಲದಲ್ಲಿ. ಕಚಪಿಚ ಕೆಸರು, ಇಂಬಳದ ರಕ್ತದೋಕುಳಿ, ಸುರಿಯುವ ಬಿರುಸು ಮಳೆ ನಡುವೆ ದುಬಾರಿ ಕ್ಯಾಮೆರಾಗಳ ಮಾನಪ್ರಾಣ ರಕ್ಷಿಸುವುದು ಅಷ್ಟೊಂದು ಸಲೀಸಲ್ಲ. ನನ್ನ ಪ್ರಕಾರ ಮಳೆಯಲ್ಲಿ ಚಿತ್ರ ತೆಗೆಯಲು ಹೊರಡುವುದೇ ಒಂದು ಹುಚ್ಚು ಸಾಹಸ. ಇಂತಹ ಪ್ರವಾಸಗಳಿಗೆ ಸಾಕಷ್ಟು ಪೂರ್ವ ತಯಾರಿ ಮಾಡಿಕೊಳ್ಳಬೇಕಾಗುತ್ತದೆ. ದುರಂತವೆಂದರೆ ಅದನ್ನು